ನಾಶಮಾಡಿದ್ದಾರೆಯೆ? ಇಷ್ಟೆಲ್ಲ ಯುದ್ಧಗಳಾದವು, ಯುದ್ಧಗಳು ಇಂದಿಗೂ ನಡೆಯುತ್ತಿವೆ... ಇವೆಲ್ಲ ಮಾಡುತ್ತಿರುವುದು ಯಾರು? ಮತ್ತು ಸಾಯುತ್ತಿರುವುದು ಯಾರು? ಇದೆಲ್ಲ ಕವಿಯಾಗಿ, ಮನುಷ್ಯನಾಗಿ ನನ್ನನ್ನು ವಿಚಲಿತಗೊಳಿಸುತ್ತದೆ. ನಿಸರ್ಗಕ್ಕೆ ಈ ಪ್ರಮಾಣದ ಕಾರ್ಖಾನೆಗಳ, ವಾಹನಗಳ ವಿಷ ಉಗುಳಲು ಬಡವರಿಗೆ ಸಾಧ್ಯವೆ? ಇದೆಲ್ಲವನ್ನೂ ಸಮಾಜ ಮಾಡುತ್ತಿಲ್ಲ, ಬಂಡವಾಳಶಾಹಿಗಳು ಮಾಡುತ್ತಿದ್ದಾರೆ. ಕಾರ್ಲ್‌ಮಾರ್ಕ್ಸ್ ಅವರ ಪ್ರಸಿದ್ಧವಾದ ಹೇಳಿಕೆಯೊಂದಿದೆ: 'ಮನುಷ್ಯರು ಪ್ರಕೃತಿಯೊಂದಿಗೆ ನಡೆದುಕೊಂಡಂತೆಯೇ, ಇನ್ನೊಬ್ಬ ಮನುಷ್ಯರೊಂದಿಗೆ ನಡೆದುಕೊಳ್ಳುತ್ತಾರೆ.' ನೀವು ಮನುಷ್ಯರಾಗಿ ಇನ್ನೊಬ್ಬ ಮನುಷ್ಯನನ್ನು ನಾಶಗೊಳಿಸುತ್ತೀರಿ ಎಂದಾದರೆ, ಪ್ರಕೃತಿಯನ್ನು ಕೂಡ ನಾಶಗೊಳಿಸುವಿರಿ. ನಾಶವೇ ನಿಮ್ಮ ಉದ್ದೇಶವಾದಾಗ ಪ್ರಕೃತಿಯಾದರೂ ಅಷ್ಟೇ, ಮನುಷ್ಯರಾದರೂ ಅಷ್ಟೇ. ಶೋಷಣೆಯೆಂದರೆ ಏನು? ಕೆಲವರ ಹತ್ತಿರ ಅಪಾರವಾದ ಸಂಪತ್ತು, ಮತ್ತೆ ಕೆಲವರ ಹತ್ತಿರ ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲ. ಇದೇ ಶೋಷಣೆಯಲ್ಲವೆ? ಪ್ರಜಾಪ್ರಭುತ್ವದಡಿಯಲ್ಲೇ ನಾವಿದನ್ನು ಒಪ್ಪಿಕೊಂಡಿದ್ದೇವೆ. ಹೀಗಿರುವುದು ಸಾಮಾನ್ಯ ಅಂತ ನಮಗೆ ಅನಿಸಿಬಿಟ್ಟಿದೆ. ನಮ್ಮ ದೇಶದ ಎಪ್ಪತ್ತು ಪ್ರತಿಶತ ಸಂಪತ್ತಿನ ಮೇಲೆ ಕೇವಲ ಒಂದು ಪ್ರತಿಶತ ಜನರಿಗೆ ಅಧಿಕಾರವಿದೆ. ಅದರಲ್ಲೂ ಐವತ್ತು ಪ್ರತಿಶತ ಸಂಪತ್ತು ಕೇವಲ ಇಪ್ಪತ್ತೊಂದು ಜನರಿಗೆ ಸೇರಿದೆ. ಇಡೀ ಜಗತ್ತಿನ ಪರಿಸ್ಥಿತಿಯೂ ಹೆಚ್ಚೂ ಕಡಿಮೆ ಹೀಗೆಯೇ ಇದೆ. ಉತ್ಪಾದನೆಗಳ ಮೇಲೆ ಯಾರಿಗೆ ಹಕ್ಕಿದೆಯೊ ಅವರೇ ಅಧಿಕಾರ ಚಲಾಯಿಸುತ್ತಾರೆ. ಮಾಲೀಕರು ಅಧಿಕಾರ ಚಲಾಯಿಸುತ್ತಾರೆ. ಮಾರ್ಕ್ಸ್‌ವಾದ ಈಗ ವಿಭಿನ್ನ ರೀತಿಯಲ್ಲಿ ಬೆಳೆದಿದೆ. ಜಗತ್ತಿನ ಅನೇಕ ಮಹತ್ವದ ದಾರ್ಶನಿಕರ ಮೇಲೆ ಮಾರ್ಕ್ಸ್‌ವಾದ ಒಂದಿಲ್ಲೊಂದು ಬಗೆಯಲ್ಲಿ ಪ್ರಭಾವ ಬೀರಿದೆ. ಯಾರಿಗೆ ಇದು ಇಷ್ಟವಾಗುತ್ತದೊ, ಬಿಡುತ್ತದೊ ಅದು ಬೇರೆ ಮಾತು. ಆದರೆ ಅನೇಕ ಸತ್ಯಗಳನ್ನು ಇದು ಹೇಳಿದೆ. ಇದನ್ನು ಬಿಟ್ಟು ಮುನ್ನಡೆಯಲು ಸಾಧ್ಯವಿಲ್ಲ. ಯುದ್ಧಗಳು ಇಲ್ಲದೇ ಇದ್ದರೆ ಅನೇಕ ದೇಶಗಳ ಬಜೆಟ್‌ನ ಹಣವನ್ನು ಎಷ್ಟೆಲ್ಲಾ ಒಳ್ಳೆಯ ಕೆಲಸಗಳಿಗೆ ಬಳಸಬಹುದು. ಇದನ್ನು ನಾವ್ಯಾಕೆ ಯೋಚಿಸುತ್ತಿಲ್ಲ. ಇಡೀ ಜಗತ್ತಿಗೆ ಬೇಕಾಗಿರುವುದು ಮಿಲಿಟರಿ ವ್ಯವಸ್ಥೆಯಲ್ಲ. ಬೇಕಾಗಿರುವುದು ಪ್ರೇಮ. ಪ್ರೇಮವಿಲ್ಲದ ಪ್ರತಿಯೊಂದು ಸಂಬಂಧ ಕೂಡ ಅನೈತಿಕ. ಅದು ವಿವಾಹವೇ ಆಗಿರಲಿ, ಸಾಮಾಜಿಕ ಜೀವನವೇ ಆಗಿರಲಿ, ರಾಜಕೀಯವೇ ಆಗಿರಲಿ. ನೈತಿಕವಾದದ್ದು ಕೇವಲ ಪ್ರೇಮ ಮಾತ್ರ. ಇದೆಲ್ಲವನ್ನು ನಾನು ಮಾರ್ಕ್ಸ್‌ವಾದದಿಂದ ಕಲಿತೆ. ಎಲ್ಲಾ ಮನುಷ್ಯರು ಸಮಾನರು ಎಂಬ ಕಲ್ಪನೆಗಿಂತ ದೊಡ್ಡ ಕಲ್ಪನೆ ಯಾವುದಿದೆ?

ಲೋಹಿಯಾ ಅವರು ಕೂಡ ನನಗೆ ಇಷ್ಟ. ಯಾಕೆಂದರೆ ಲೋಹಿಯಾ ಬಡವರ ಕುರಿತು ಮಾತಾಡುತ್ತಿದ್ದರು. ದೊಡ್ಡ ವಿದ್ವಾಂಸರು. ನಮ್ಮ ಊರಿನಲ್ಲಿ ಲೋಹಿಯಾವಾದಿಗಳ ಪ್ರಭಾವ ಹೆಚ್ಚಿತ್ತು. ಅವರು ನಡೆಸುತ್ತಿದ್ದ ಪತ್ರಿಕೆ ನಮ್ಮ ಮನೆಗೆ ಬರುತ್ತಿತ್ತು. ಭಾರತೀಯ ಸಂಸ್ಕೃತಿಯನ್ನೂ ಕೂಡ ಲೋಹಿಯಾ ಹೊಸ ರೀತಿಯಲ್ಲಿ ವ್ಯಾಖ್ಯಾನಿಸಿದರು. ಜಯಪ್ರಕಾಶ ನಾರಾಯಣರಿಂದ ನಾನು ಅಷ್ಟಾಗಿ ಪ್ರಭಾವಿತನಾಗಲಿಲ್ಲ. ಇದಕ್ಕೊಂದು ಕಾರಣವಿದೆ. ಜೆಪಿ ಚಳವಳಿ ನಡೆದಾಗ ನಾನು ಪಾಟ್ನಾದಲ್ಲಿ ಬಿ.ಎ. ಓದುತ್ತಿದ್ದೆ. ಆ ಚಳವಳಿಯ ಕಾರಣದಿಂದಾಗಿ ನನ್ನ ಮೂರು ವರ್ಷಗಳು ವ್ಯರ್ಥವಾದವು. ಜೊತೆಗೆ ಆ ಚಳವಳಿಯಲ್ಲಿ ತುಂಬಾ ಜನ ಶ್ರೀಮಂತರು ನಾಯಕರಾಗಿದ್ದರು. ಇಂದಿರಾ ಗಾಂಧಿಯನ್ನು ವಿರೋಧಿಸುವುದು ಅವರ ಏಕೈಕ ಅಜೆಂಡಾ ಆಗಿತ್ತು. ಇದೆಲ್ಲಾ ಯಾಕೋ ನನಗೆ ಸರಿಕಾಣಲಿಲ್ಲ. ಇಂದಿರಾ ಅವರ ಕಾಲದಲ್ಲಿ ಭೂಸುಧಾರಣೆ ಜಾರಿಯಾಗಿತ್ತು, ಬ್ಯಾಂಕುಗಳ ರಾಷ್ಟ್ರೀಕರಣವಾಗಿತ್ತು, ಸಂವಿಧಾನದಲ್ಲಿ ಸಮಾಜವಾದಿ ಮತ್ತು ಜಾತ್ಯತೀತ ಕಲ್ಪನೆಗಳಿಗೆ ಬಲ ಬಂದಿತ್ತು. ಇವರೆಲ್ಲ ಇಂದಿರಾ ಅವರ ವಿರೋಧಿಗಳಾಗಿದ್ದರು, ಸೋವಿಯತ್ ಒಕ್ಕೂಟದ ವಿರೋಧಿಗಳಾಗಿದ್ದರು. ಇವರೆಲ್ಲ ಅಮೆರಿಕದ ಪರವಾಗಿದ್ದರು. ಇದೆಲ್ಲಾ ನನಗೆ ಇಷ್ಟವಾಗಲಿಲ್ಲ. ಜಯಪ್ರಕಾಶ ನಾರಾಯಣರು ಅಯ್ಯೂಬ್‌ಖಾನ್ ಅವರ ಸಮರ್ಥಕರಾಗಿದ್ದರು. ತುರ್ತುಪರಿಸ್ಥಿತಿ ಹೇರಿದ್ದು ತಪ್ಪು. ಆದರೆ ತುರ್ತುಪರಿಸ್ಥಿತಿ ವಿರೋಧಿಸುವಂತೆ ಅವರು ಸೈನ್ಯಕ್ಕೆ ಕರೆಕೊಟ್ಟರು. ಜನರಿಗೆ ಕರೆಕೊಟ್ಟರೆ ತಪ್ಪಲ್ಲ. ಆದರೆ ಸೈನ್ಯವನ್ನು ಪ್ರಚೋದಿಸುವುದು ತಪ್ಪು. ಒಂದು ದೇಶದ ಸೈನ್ಯಕ್ಕೆ ಪರಮಾಧಿಕಾರ ಸಿಕ್ಕರೆ